ಈ) ಸರ್ಕಾರಕ್ಕೆ ಸಲ್ಲಿಸಿದ ರೂಪರೇಖೆ ಯೋಜನೆಯು ಸ್ಟೇಟ್ ಲೆವೆಲ್ ಕೋ-ಆರ್ಡಿನೇಷನ್ ಕಮಿಟಿಯು, ಮತ್ತು ರಾಜ್ಯ ಮಂತ್ರಿ ಮಂಡಲ ಪರಿಶೀಲಿಸಿ ಒಪ್ಪಿಗೆ ನೀಡಿದ ನಂತರ ಯೋಜನೆಯನ್ನು ಶೀಘ್ರವಾಗಿ ಪ್ರಾರಂಭಿಸುವುದಕ್ಕೆ ಭಾರತ-ಜರ್ಮನಿ ನಡುವೆ ಒಪ್ಪಂದ ಮಾಡಿಕೊಳ್ಳಲು ಭಾರತ ಸರ್ಕಾರವನ್ನು ಕೋರಿರುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ವೈದ್ಯರು ಹಾಗೂ ಇತರೆ ಸಿಬ್ಬಂದಿಗೆ ವಿಶೇಷ ಭತ್ಯೆ.

೮೭೪ ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ಸರ್ಕಾರಿ ವೈದ್ಯರು ಹಾಗೂ ಇತರ ವೈದ್ಯಕೀಯ ಸಿಬ್ಬಂದಿ ವರ್ಗದವರಿಗೆ ವಿಶೇಷ ಭತ್ಯೆ ಕೊಡುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಆ) ಇದ್ದಲ್ಲಿ ವಿವರಗಳನ್ನು ಒದಗಿಸುವುದು.

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಳಗಾಂ ಜಿಲ್ಲೆಯ ಶ್ರೀಕ್ಷೇತ್ರ ಸೋಗಾಲಯದಲ್ಲಿ ಚಿಗರೆ ಬನ ಸ್ಥಾಪನೆ

೮೭೮ ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲ ಹೊಂಗಲ).—ಮಾನ್ಯ ಅರಣ್ಯ ಮಂತ್ರಿ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಳಗಾಂ ಜಿಲ್ಲೆಯ ಶ್ರೀಕ್ಷೇತ್ರ ಸೋಗಾಲಯದಲ್ಲಿ ಚಿಗರೆ ಬನ (ಡೀರ್ ಪಾರ್ಕ್) ಸ್ಥಾಪಿಸುವ ಕೆಲಸ ಯಾವಾಗ ಪ್ರಾರಂಭವಾಯಿತು ?

ಆ) ಈ ಚಿಗರೆ ಬನದ ನಿರ್ಮಾಣ ಕಾರ್ಯ ಈಗ ಯಾವ ಹಂತದಲ್ಲಿದೆ ?

ಇ) ಈ ಬನದ ನಿರ್ಮಾಣಕ್ಕಾಗಿ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ?

ಈ) ಈ ಕಾರ್ಯಕ್ಕಾಗಿ ಇದುವರೆವಿಗೂ ಖರ್ಚಾದ ಹಣವೆಷ್ಟು ?

ಉ) ಈ ಚಿಗರೆ ಬನದ ಕಾರ್ಯವನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಸಚಿವರು).—

ಅ) ಇನ್ನೂ ಪ್ರಾರಂಭಿಸಿರುವುದಿಲ್ಲ.

ಇ) ಈ ವನದ ನಿರ್ಮಾಣಕ್ಕಾಗಿ ಅಗತ್ಯ ಅಂದಾಜು ಪಟ್ಟಿಯನ್ನು ತಯಾರಿಸಿ, ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಒಪ್ಪಿಗೆ ಪಡೆಯಲು ಇಲಾಖೆ ಕ್ರಮ ಕೈಗೊಂಡಿರುತ್ತದೆ. ಆಯ್ಕೆ ಮಾಡಿದ ಸ್ಥಳದಲ್ಲಿ ಸೂಕ್ತ ಜಾತಿಯ ಗಿಡಗಳನ್ನು ಮಳೆಗಾಲದಲ್ಲಿ ನೆಡಲು ಕ್ರಮ ಹಾಕಿಕೊಳ್ಳಲಾಗಿದೆ.

ಇ) ೧೯೮೯-೯೦ನೇ ಸಾಲಿನಲ್ಲಿ ಯೋಜನೇತರ ಶೀರ್ಷಿಕೆಯಡಿಯಲ್ಲಿ ರೂ. ೫೦,೦೦೦-೦೦ ಗಳನ್ನು ಬಿಡುಗಡೆ ಮಾಡಲಾಗಿತ್ತು.

ಈ) ಕಾರ್ಯಕ್ಕಾಗಿ ಹಣ ವೆಚ್ಚ ಈತನಕ ಮಾಡಿರುವುದಿಲ್ಲ.

ಉ) ಈಗಾಗಲೇ ಚಿಗರೆ ಬನದ ಕಾರ್ಯವನ್ನು (ಅ) ಪ್ರಶ್ನೆಗೆ ಉತ್ತರಿಸಲಾದಂತೆ, ಕಾರ್ಯ ವಿಧಾನವನ್ನು ಪೂರ್ಣಗೊಳಿಸಿ, ನಿರ್ಮಾಣ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು ಮತ್ತು ಹಂತ ಹಂತವಾಗಿ ಬೇಗನೆ ಪೂರ್ಣಗೊಳಿಸಲಾಗುವುದು.